ಮೂಲ ದಾವಾ ಸಂಖ್ಯೆ . 211/2016 ಪಿ ಡಬ್ಲ್ಯೂ 1

(ದಿನಾಂಕ 01-10-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎ ಸಿ ಎಸ್ ವಕೀಲರಿಂದಃ-

ನಾನು ಮೂಲತಃ ಹೊಸಕೇರಿ ಗ್ರಾಮದವನು. ನನ್ನ ಜನನದಿಂದಲೂ ಅದೇ ಗ್ರಾಮದಲ್ಲಿ ವಾಸವಾಗಿರುತ್ತೇನೆ. ನನಗೆ ಓದಲು ಬರೆಯಲು ಬರುವುದಿಲ್ಲ. ನಾನು ಈ ದಾವೆಯನ್ನು ನಾಗಮ್ಮನ ಮೇಲೆ ದಾಖಲಿಸಿದ್ದೇನೆ. ದಾವಾಸ್ತಿಯು ಮೂಲತಃ ನಂದೇ ಆಗಿರುತ್ತದೆ. ದಾವಾಸ್ತಿ ಮೂಲತಃ ಸರ್ಕಾರದ್ದು ಎಂದರೆ ಸರಿ. ಸರ್ಕಾರದವರು ಸುಮಾರು 16 ಮನೆಗಳನ್ನು ವಿವಿಧ ಪಲಾನುಭವಿಗಳಿಗೆ ನೀಡಿದ್ದು ಇರುತ್ತದೆ. ಸರ್ಕಾರದವರು ಮನೆಯನ್ನು ಕಟ್ಟಿ ನಮಗೆ ನೀಡಿದ್ದು ಇರುತ್ತದೆ. ಸನ್ 1981-82 ರಲ್ಲಿ ಸರ್ಕಾರದವರು ಮನೆಗಳನ್ನು ಹಂಚಿಕೆ ಮಾಡಿರುತ್ತಾರೆ. ಈ ರೀತಿ ಮನೆ ಮಂಜೂರಾದ ಬಗ್ಗೆ ದಾಖಲೆ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಅದು ಯಾವ ದಾಖಲೆ ಅಂತಾ ನನಗೆ ಹೇಳಲು ಬರುವುದಿಲ್ಲ. ನನ್ನ ಆಸ್ತಿ ನಂ.2/13 ಇರುತ್ತದೆ. ಸದರಿ ಆಸ್ತಿಯ ವಿಸ್ತೀರ್ಣ 30 )( 40 ಇರುತ್ತದೆ. ನನಗೆ ನೀಡಿದ ಮನೆಯ ಅಳತೆ 30 )( 40 ಅಡಿ ಇರುತ್ತದೆ. ಸದರಿ 16 ಫಲಾನುಭವಿಗಳ ಪೈಕಿ 3 ಜನರು ಮಾತ್ರ ಸದರಿ ಮನೆಗಳನ್ನು ಸ್ವಾಧೀನಕ್ಕೆ ಪಡೆದಿರುತ್ತಾರೆ ಉಳಿದವರು ಸದರಿ ಮನೆಗಳ ಸ್ವಾಧೀನವನ್ನು ಪಡೆದಿರುವುದಿಲ್ಲ ಅಂತಾ ಬಿ ಡಿ ಓ ಇವರು ಪತ್ರ ನೀಡಿರುತ್ತಾರೆಂದರೆ ಸರಿಯಲ್ಲ. ದಾವಾ ಆಸ್ತಿಯು ದಶಮಾಪುರ ಪಂಚಾಯ್ತಿಗೆ ಒಳಪಡುತ್ತದೆ. ಸದರಿ ಆಸ್ತಿಯ ವಾರ್ಡ ನಂಬರ್ ನನಗೆ ಗೊತ್ತಿಲ್ಲ ಆಸ್ತಿ ನಂಬರ್ 2/13 ಇರುತ್ತದೆ. ದಾವಾಸ್ತಿಯ ಚಕ್ಕುಬಂದಿ ಪೂಃ ಕೂಡ್ಲಿಗಿ ರಸ್ತೆ, ಪಃ ಬಯಲು ಜಾಗ, ಉಃ ನಮ್ಮ ಅಣ್ಣ ಸಣ್ಣೀರಪ್ಪ ಇವರ ಸ್ವತ್ತು, ದಃಉಪ್ಪಾರಗಟ್ಟೆ ಸಣ್ಣೀರಪ್ಪ ಇವರ ಸ್ವತ್ತು ಬರುತ್ತದೆ. ನಮ್ಮ ಕುಟುಂಬದಲ್ಲಿ ನನಗೆ ಒಂದು ಮನೆ ಮತ್ತು ನನ್ನ ಅಣ್ಣ ಸಣ್ಣೀರಪ್ಪ ಇವರಿಗೆ ಒಂದು ಮನೆ ಸರ್ಕಾರದಿಂದ ಮಂಜೂರಾಗಿರುತ್ತದೆ. ನಮ್ಮ ಅಣ್ಣ ಅದೇ ಮನೆಯಲ್ಲಿ ವಾಸವಾಗಿರುತ್ತಾನೆ. ದಾವಾಸ್ತಿಯ ಉತ್ತರಕ್ಕೆ ನನ್ನ ಅಣ್ಣನ ಮನೆ ಇರುತ್ತದೆ. ನಾನು ಹೇಳುತ್ತಿರುವುದು ಸುಳ್ಳು ಎಂದರೆ ಸರಿಯಲ್ಲ.

ಯಾವ ಯಾವ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆಂದು ನನಗೆ ಹೇಳಲು ಬರುವುದಿಲ್ಲ. ದಶಮಾಪುರ ಗ್ರಾಮ ಪಂಚಾಯ್ತಿ 2016-17 ರಲ್ಲಿ ಆಗಿರುತ್ತದೆ. ದಾವಾಸ್ತಿಗೆ ಸಂಬಂಧಿಸಿದ ತೆರಿಗೆಯನ್ನು ನಾನು ಕಟ್ಟಿರುತ್ತೇನೆ. ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ನನ್ನ ಅಣ್ಣ ಸಣ್ಣೀರಪ್ಪ ಇವನ ಮನೆಯ ಚಕ್ಕುಬಂದಿ ಪೂಃ ಕೂಡ್ಲಿಗಿ ರಸ್ತೆ, ಪಃ ಬಯಜಾಗಇದೆ, ಉಃ ರಾಟಿ ಈರಣ್ಣನ ಸ್ವತ್ತು ಮತ್ತು ದಃ ನನ್ನ ಮನೆ ಇರುತ್ತದೆ. ದಕ್ಷಿಣಕ್ಕೆ

ಪ್ರತಿವಾದಿ ನಂ.1 ರವರ ಅಸ್ತಿ ಬರುತ್ತದೆಂದರೆ ಸುಳ್ಳು. ನಮ್ಮ ಅಣ್ಣನ ಆಸ್ತಿಗೆ ಸಂಬಂಧಿಸಿದ ಫಾರಂ ನಂ.9 ರಲ್ಲಿ ನನ್ನ ಅಣ್ಣನ ಆಸ್ತಿಯ ದಕ್ಷಿಣ ದಿಕ್ಕಿಗೆ ಪ್ರತಿವಾದಿ ನಂ.1 ರವರ ಆಸ್ತಿ ಇದೆ ಅಂತಾ ನಮೂದಾಗಿದೆ ಎಂದರೆ ಸುಳ್ಳು. ನನ್ನ ಸಾಕ್ಷ್ಯ ಪ್ರಮಾಣಪತ್ರ ಬರೆಯಲು ಮತ್ತು ದಾವೆ ಸಲ್ಲಿಸಲು ವಕೀಲರಿಗೆ ನಾನೇ ಮಾಹಿತಿ ನೀಡಿರುತ್ತೇನೆ. ಅದರಲ್ಲಿ ಬರೆದಿರುವ ವಿಚಾರ ನನಗೆ ಸಂಪೂರ್ಣ ಗೊತ್ತು.

ಹೋಟೆಲ್ ಚನ್ನಮ್ಮ ಇವರು ನಮ್ಮ ಗ್ರಾಮದಲ್ಲಿದ್ದಳು ಎಂದರೆ ಸಾಕ್ಷಿಯು ಅವಳು ತನ್ನ ಮಗಳ ಮನೆಯಲ್ಲಿದ್ದರು ಎನ್ನುತ್ತಾರೆ. 1ನೇ ಪ್ರತಿವಾದಿ ಹೋಟೆಲ್ ಚನ್ನಮ್ಮ ಇವರ ಮನೆಯಲ್ಲಿ ವಾಸವಾಗಿರುತ್ತಾಳೆಂದರೆ ಸಾಕ್ಷಿಯು ನಮ್ಮ ಮನೆಯಲ್ಲಿ ಅಕ್ರಮವಾಗಿ ವಾಸವಾಗಿದ್ದಾಳೆನ್ನುತ್ತಾರೆ. ನಿಮ್ಮ ಸಾಕ್ಷ್ಯ ಪ್ರಮಾಣಪತ್ರದ ಪ್ಯಾರಾ ನಂ.6 ರಲ್ಲಿ 1ನೇ ಪ್ರತಿವಾದಿಯು ಗ್ರಾಮ ಪಂಚಾಯ್ತಿ ಕೆಲವು ವ್ಯಕ್ತಿಗಳ ಸಹಾಯದಿಂದ ಕಾನೂನುಬಾಹಿರವಾಗಿ ದಾಖಲೆಗಳನ್ನು ಸೃಷ್ಟಿ ಮಾಡಿರುತ್ತಾರೆ ಅಂತಾ ಹೇಳಿದ್ದು, ಸದರಿ ವ್ಯಕ್ತಿಗಳು ಯಾರು ಎಂದರೆ ಸಾಕ್ಷಿಯು ಉಪ್ಪಾರಗಟ್ಟಿ ಅಜ್ಜಯ್ಯ ಅವನು ಮರಣ ಹೊಂದಿರುತ್ತಾನೆ ಎನ್ನುತ್ತಾನೆ. ದಶಮಾಪುರ ಗ್ರಾಮ ಪಂಚಾಯ್ತಿಯಲ್ಲಿ ನಾನು ದಾವಾಸ್ತಿಯ ತೆರಿಗೆಯನ್ನು ಕಟ್ಟಿರುವುದಿಲ್ಲ, ನಾನು ಹನಸಿ ಪಂಚಾಯ್ತಿಯಲ್ಲಿ ತೆರಿಗೆಯನ್ನು ಕಟ್ಟಿರುತ್ತೇನೆ. ಪ್ರತಿವಾದಿಯರು ನನಗೆ ತೊಂದರೆ ಕೊಟ್ಟ ಬಗ್ಗೆ ನಾನು ಪೋಲೀಸರಿಗೆ ದೂರು ನೀಡಿದ್ದೇನೆ. ಆ ಬಗ್ಗೆ ನಾನು ದಾಖಲೆ ಸಲ್ಲಿಸಿರುವುದಿಲ್ಲ. ದಾವಾ ಸ್ವತ್ತಿನಲ್ಲಿ ಈಗಲೂ ಜನತಾ ಮನೆ ಇದೆ. ಆ ಸ್ವತ್ತಿನಲ್ಲಿ ಜನತಾ ಮನೆ ಇಲ್ಲ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. 1ನೇ ಪ್ರತಿವಾದಿಯ ಹೆಸರಿಗೆ ಆಸ್ತಿಯು ಯಾವ ರೀತಿ ದಾಖಲಾಯಿತು ಅಂತಾ ನಾನು ಮೌಖಿಕವಾಗಿ ಪಂಚಾಯ್ತಿ ಅಧಿಕಾರಿಗಳಿಗೆ ಕೇಳಿರುತ್ತೇನೆ. ಅವರು ನಮಗೆ 1ನೇ ಪ್ರತಿವಾದಿಯ ಹೆಸರಿಗೆ ಆಸ್ತಿಯಾಗಿದೆ ನಿಮ್ಮದು ಏನೂ ಇಲ್ಲ ಅಂತಾ ತಿಳಿಸಿರುತ್ತಾರೆ. ದಾವಾ ಸ್ವತ್ತಿನಲ್ಲಿ ಪ್ರತಿವಾದಿಯರು ಸ್ವಾಧೀನದಲ್ಲಿರುತ್ತಾರೆಂದರೆ ಸುಳ್ಳು. ದಾವಾ ಸ್ವತ್ತಿನಲ್ಲಿ ನಾನು ಸ್ವಾಧೀನದಲ್ಲಿರುತ್ತೇನೆ ಎನ್ನುವ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಮಾಡಿದ್ದೇನೆ. 1ನೇ ಪ್ರತಿವಾದಿಯು ಈಗಲೂ ದಾವಾಸ್ವತ್ತಿನ ತೆರಿಗೆಯನ್ನು ಕಟ್ಟಿರುತ್ತಾರೆಂದರೆ ಸರಿ, ಸಾಕ್ಷಿ ಮುಂದುವರೆದು ನಮಗೆ ಬಿಡಿಸಲು ಕಟ್ಟಿರುತ್ತಾರೆಂದು ನುಡಿಯುತ್ತಾರೆ. 1ನೇ ಪ್ರತಿವಾದಿಯು ಈಗಲೂ ಒಬ್ಬಳೇ ಇರುತ್ತಳೆಂದರೆ ಸರಿ.

ದಾವಾ ಸ್ವತ್ತು ಈಗ ದಶಮಾಪುರ ಗ್ರಾಮದ ಪಂಚಾಯ್ತಿ ಆಸ್ತಿ ನಂ.120 ಆಗಿದೆ ಎಂದರೆ ಅವರು ನಮಗೆ ಗೊತ್ತಿಲ್ಲದ ಹಾಗೆ ಮಾಡಿಕೊಂಡಿರುತ್ತಾರೆ ಎನ್ನುತ್ತಾರೆ. 1ನೇ ಪ್ರತಿವಾದಿಯ

ಮೂಲ ದಾವಾ ಸಂಖ್ಯೆ . 211/2016 ಪಿ ಡಬ್ಲ್ಯೂ 1

ಹೆಸರಿನಲ್ಲಿ ದಾಖಲೆಯಾದ ಬಗ್ಗೆ ನನಗೆ ಸನ್ 2015-16 ನೇ ಸಾಲಿನಲ್ಲಿ ತಿಳಿದಿರುತ್ತದೆ. ದಾವಾಸ್ತಿಗೆ ಸಂಬಂಧಿಸಿದಂತೆ ಗ್ರಾಮ ಪಂಚಾಯ್ತಿಯವರು 1 ನೇ ಪ್ರತಿವಾದಿಯ ಹೆಸರಿಗೆ ನಮೂನೆ ನಂ.9 ಮತ್ತು 11 ಎ ನೀಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. ದಾವಾಸ್ತಿಗೆ ಸಂಬಂಧಪಟ್ಟಂತೆ ನನ್ನ ಹೆಸರಿಗೆ ಯಾವುದೇ ದಾಖಲೆಗಳು ಇರುವುದಿಲ್ಲ ಅನ್ಯಾಯವಾಗಿ 1 ನೇ ಪ್ರತಿವಾದಿಯರು ದಾಖಲೆ ಮಾಡಿಕೊಂಡಿರುತ್ತಾರೆ. ನನ್ನ ಹೆಸರಿಗೆ ದಾವಾಸ್ತಿಗೆ ಸಂಬಂಧಿಸಿದಂತೆ ಯಾವ ದಾಖಲಾತಿ ಇದೆ ಅಂತಾ ಹೇಳಲು ಬರುವುದಿಲ್ಲ. ದಾವಾ ಸ್ವತ್ತು 1 ನೇ ಪ್ರತಿವಾದಿಗೆ ಸೇರಿದ ಸ್ವತ್ತಾಗಿದ್ದು ಅವಳು ಸದರಿ ಆಸ್ತಿಯಲಿಲ ಸ್ವಾಧೀನದಲ್ಲಿದ್ದು ದಾವಾಸ್ತಿಯಲ್ಲಿ ನನಗೆ ಯಾವುದೇ ಹಕ್ಕು ಅಧಿಕಾರ ಇರುವುದಿಲ್ಲ ಆದರೂ ಸಹಾ ನಾನು ಸುಳ್ಳು ದಾವೆಯನ್ನು ದಾಖಲಿಸಿ ಸುಳ್ಳುಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ